ಸೀಮಿತವಾಗುವಂಥದ್ದಲ್ಲ. ಇದೆಲ್ಲವನ್ನೂ ಮೀರಿ ಸಂಗೀತ ಎನ್ನುವುದು ಲೀಲಾವತಿಯವರ ಬದುಕಿನ ಅರ್ಥವೇ ಆಗಿರುವಂಥದ್ದು. ಏನು ನಿಮ್ಮ ಬದುಕು ಎಂದರೆ ಸಂಗೀತ ಎಂದಾರೇನೋ. ಅವರ ಬದುಕಿನ ಯಾವುದೇ ಸಂಬಂಧಗಳು, ಸಂದರ್ಭಗಳು, ಅದರ ಆಗುಹೋಗುಗಳು ಎಲ್ಲವನ್ನೂ ಅವರು ಗ್ರಹಿಸುವುದು, ಸ್ಪಂದಿಸುವುದು ಸಂಗೀತದ ಮೂಲಕವೇ ಅನ್ನಿಸುತ್ತದೆ. ಆ ಗೌರಿಶಂಕರದೆದುರು ಮಿಕ್ಕದ್ದೆಲ್ಲವೂ ಗೌಣವೆಂದೋ ಸಹನೀಯವೆಂದೋ ಅವರು ತಿಳಿದಿದ್ದಾರೆ. ಅಥವಾ ಅದರ ಆತ್ಮವನ್ನು ಪಡೆಯಲು ಯಾವುದನ್ನು ಕೊಟ್ಟರೂ ಅಡ್ಡಿಲ್ಲವೆಂದು ಅವರು ಆರಂಭದಲ್ಲಿ ನಂಬಿದ್ದಿರಬೇಕು. ಆದ್ದರಿಂದಲೇ ಅವರ ಬದುಕಿನ ಮೇಲಿನ ಆ ಘೋರ ಪ್ರಹಾರ, ಶೋಷಣೆಯನ್ನು ಅವರು ಒಂದು ಹಂತದವರೆಗೂ ಸಹಿಸಿಕೊಂಡು ಹೋಗುತ್ತಾರೆ. ಪದ್ಮಚರಣರ ದೌರ್ಜನ್ಯವನ್ನು ಅವರು ಅಸಹಾಯಕತೆಯಿಂದ ಸಹಿಸಿಕೊಂಡರು ಎನ್ನುವುದಕ್ಕಿಂತ, ಅವರಿಂದ ಪಡೆಯುವುದು ಅಪಾರ–ಅಪೂರ್ವ ಆದ್ದರಿಂದ ಅವರ ಶೋಷಣೆಯನ್ನಿಷ್ಟು ಸಹಿಸಿಬಿಡೋಣ ಎಂದುಕೊಂಡದ್ದಿರಬೇಕು. ಆದರೆ ಯಾವಾಗ ಅದು ತನ್ನನ್ನೇ ನಾಶ ಮಾಡುವ ವಿನಾಶಕಾರಿ ಶಕ್ತಿಯದ್ದು ಎನ್ನುವುದು ಅರಿವಾಗುತ್ತದೆಯೋ ಆಗ ಅದರಿಂದ ಹೊರಬರುವ ತೀರ್ಮಾನವನ್ನು ಇವರು ಮಾಡುತ್ತಾರೆ. ತಂದೆ–ತಾಯಿ ಎಲ್ಲರೂ ಮಾಡಿದ ಪ್ರಯತ್ನಗಳು ಸೋತಮೇಲೆ ಇವರು ಮಾಡುವ ಪ್ರಯತ್ನ ಯಶಸ್ವಿಯಾಗುತ್ತದೆ. ಕೊನೆಗೂ ನಿರ್ಣಾಯಕವಾಗುವುದು ಸಂದರ್ಭದಲ್ಲಿ ಸಿಲುಕಿಕೊಂಡ ವ್ಯಕ್ತಿಯ ನಿಲುವು. ಅದೆಷ್ಟು ಬಲವಾಗಿ ಇವರು ತೀರ್ಮಾನಿಸುತ್ತಾರೆ ಎಂದರೆ, ಅಜೇಯ ಎಂದು ತನ್ನನ್ನು ತಿಳಿದುಕೊಂಡ ವ್ಯಕ್ತಿ ಹೀನಾಯವಾಗಿ ಹಿಂದೆ ಸರಿಯಬೇಕಾಗುತ್ತದೆ.

ಒಂದು ರೀತಿಯಲ್ಲಿ ಈ ಅನುಭವದಿಂದಲೋ ಏನೋ ಲೀಲಾವತಿಯವರಿಗೆ ಬದುಕಿನ ಮುಂದಿನ ಯಾವುದೇ ಸಂಘರ್ಷಗಳು ತಾನು ಗೆಲ್ಲಬಲ್ಲವು ಎನ್ನಿಸಿಬಿಡುತ್ತದೆ. ಲೋಕದ ಜೊತೆಗೆ, ಮನುಷ್ಯರ ಜೊತೆಗೆ ಹೇಗೆ ವ್ಯವಹರಿಸಬೇಕು ಎನ್ನುವುದು ನಿಚ್ಚಳವಾಗುತ್ತದೆ. ಕಳೆದುಕೊಂಡದ್ದನ್ನೆಲ್ಲ ಪಡೆಯುವುದರಲ್ಲಿ ಯಶಸ್ವಿಯಾಗುವುದು ಈ ಕಾರಣಕ್ಕೇ. ಸಿನಿಮಾ ರಂಗದಲ್ಲಿ ಆರಂಭದಿಂದಲೂ ಬೇರೂರಬಹುದಾಗಿದ್ದ ಇವರು ಗುರುವಿನ ಗರ್ವ, ಕ್ರೌರ್ಯದಿಂದ ಆ ಅವಕಾಶಗಳಿಂದ ವಂಚಿತರಾಗುತ್ತಾರೆ. ಆದರೆ ಅದರ ಹಲವು ಪಟ್ಟುಗಳಷ್ಟು ಸಾಧನೆಯನ್ನು ಮಾಡಿ ಕರ್ನಾಟಕದ ಇತಿಹಾಸದಲ್ಲಿ ದಾಖಲಾಗುತ್ತಾರೆ. ಇಷ್ಟೆಲ್ಲ ಆದಮೇಲೂ ಪದ್ಮಚರಣರಿಂದ ತಾನು ಕಲಿತದ್ದನ್ನು, ಆತನ ಪ್ರತಿಭೆಯನ್ನು ಇವರು ಗೌರವದಿಂದ ದಾಖಲಿಸುತ್ತಾರೆ. ಇದನ್ನೊಂದು ಕಹಿ ಪ್ರಕರಣ ಮಾತ್ರ ಎಂದು ದಾಖಲಿಸದೆ, ಅದರ ಕಹಿ ಸಿಹಿಗಳನ್ನು ಸಂಯಮದಿಂದ ಇವರು ನಿರೂಪಿಸುತ್ತಾರೆ.

ನಿನ್ನ ನಾಮದ ಬಲವೊಂದಿದ್ದರೆ ಸಾಕೋ ಎನ್ನುತ್ತಾರಲ್ಲ ದಾಸರು, ಹಾಗೆ ಲೀಲಾವತಿಯವರು ಸಂಗೀತವನ್ನು ಉದ್ದಕ್ಕೂ ತಮ್ಮ ನೈತಿಕ, ಭೌತಿಕ ಊರುಗೋಲಾಗಿಸಿಕೊಂಡಿರುವುದರ ನೂರಾರು ಉದಾಹರಣೆಗಳು ಇಲ್ಲಿ ಸಿಕ್ಕುತ್ತವೆ. ಸಂಗೀತವು ಇವರಿಗೆ ಶಕ್ತಿ, ಚಿಕಿತ್ಸೆ, ಮದ್ದು ಎಲ್ಲವೂ ಆಗಿದೆ. ಇದರ ಜೊತೆಗೆ ಮನುಷ್ಯರ ಮೇಲಿನ ನಂಬಿಕೆಯೂ ಸೇರಿ ಇವರದೊಂದು ಶ್ರೀಮಂತವಾದ, ಎತ್ತರದ ಬದುಕಾಗಿದೆ. ಮೊದಲ ಮದುವೆಯ ಆಕಸ್ಮಿಕ ಅಂತ್ಯದ ನಂತರ ಸಿಗುವ ರಘುರಾಮ್ ಗಂಡನಲ್ಲದೆ ಸಂಗಾತಿಯೂ ಆದವರು. ಮೊದಲ ಮದುವೆಯ ಮಗ ಕೂಡ ಇವರಿಗೊಬ್ಬ ಆಪ್ತಸ್ನೇಹಿತ. ಅಣ್ಣ ತಮ್ಮಂದಿರು ಸಭೆಯೊಳಗೆ ಬೆನ್ನು ಕಟ್ಟುವಂತಹವರು. ಇವರ ಪ್ರತಿಭೆಯ ಕಾರಣಕ್ಕೇ ಸಿಕ್ಕ ನೂರಾರು ಅವಕಾಶಗಳು, ಅವು ಬೆಳೆಯುತ್ತಲೇ ಹೋದ ಪರಿ – ಈ ಎಲ್ಲವೂ ಸೇರಿ ಲೀಲಾವತಿಯವರನ್ನು 'ಯಶಸ್ವಿ ವ್ಯಕ್ತಿತ್ವ'ವಾಗಿಸುತ್ತವೆ.

ಈ ನಿರೂಪಣೆಯ ಮಹತ್ವ ಇರುವುದು ಕೇವಲ ಈ ವಿವರಗಳನ್ನು ಕೊಡುವುದರಲ್ಲಲ್ಲ. ಲೀಲಾವತಿಯವರು ಬದುಕಿನುದ್ದಕ್ಕೂ ಉಳಿಸಿಕೊಂಡು ಬಂದ ಮನುಷ್ಯರ ಬಗೆಗಿನ, ಬದುಕಿನ ಬಗೆಗಿನ, ಸ್ವತಃ ತನ್ನ ಬದುಕಿನ ಬಗೆಗಿನ ನಿತಾಂತ ಪ್ರೀತಿ ಇದನ್ನೊಂದು ವಿಶಿಷ್ಟ ಕೃತಿಯಾಗಿಸುತ್ತದೆ. ಹೆಣ್ಣು ಹೇಳಿಕೊಳ್ಳಬಾರದು ಎಂದು ಶಾಸನ ವಿಧಿಸುವ ಅಂಶಗಳನ್ನು ಎಡಗೈಯಿಂದ ಪಕ್ಕಕ್ಕೆ ಸರಿಸಿ ಲೀಲಾವತಿಯವರು ಬದುಕಿನ ಸಣ್ಣ ಪುಟ್ಟ, ದೊಡ್ಡ ಸಂಗತಿಗಳನ್ನು ಬದುಕಿನ ಇತರ ಸಂಗತಿಗಳನ್ನು ಹೇಳುವಷ್ಟೇ ಸಹಜ ಧ್ವನಿಯಲ್ಲಿ ಮಾತ್ರವಲ್ಲ, ಅಪಾರ ಜೀವನಪ್ರೀತಿಯಲ್ಲಿ ಹೇಳುತ್ತಾ ಹೋಗುತ್ತಾರೆ. ಈ ಯಾವ